

بسم اللهِ الرّحمٰن الرّحيم

# ರಮಝಾನಿನ ಕೊನೆಯ ಹತ್ತು: ಪ್ರಾರ್ಥನೆ ಮತ್ತು ಪಶ್ಚಾತ್ತಾಪವನ್ನು ದುರೂದ್‌ನೊಂದಿಗೆ ಬಲಪಡಿಸಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **30–04–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಈಗ ನಾವು ರಮಝಾನ್ ತಿಂಗಳಿಂದ ಸಾಗುತ್ತಿದ್ದೇವೆ ಮತ್ತು ಕೊನೆಯ ಹತ್ತು ಅನುಗ್ರಹೀತ ದಿನಗಳನ್ನು ಪ್ರವೇಶಿಸುತ್ತಿದ್ದೇವೆ. ಅಲ್ಲಾಹನು ನರಕದಿಂದ ಮುಕ್ತಿ ನೀಡುತ್ತಾನೆ ಎಂದು ರಮಝಾನಿನ ಕೊನೆಯ ಹತ್ತು ದಿನಗಳ ಕುರಿತು ಹಝ್ರತ್ ಪೈಗಂಬರ್(ಸ) ಹೇಳಿದ್ದರು. ಆದ್ದರಿಂದ ನಾವು ಈ ದಿನಗಳಲ್ಲಿ ವಿಶೇಷವಾಗಿ ನಮ್ಮ ಆರಾಧನೆಗಳನ್ನು ಮನೋಹರಗೊಳಿಸಲಿಕ್ಕಾಗಿ ದುರೂದ್, ತೌಬ, ಇಸ್ತಿಗ್‌ಫಾರ್ ಹಾಗೂ ಜನರ ಹಕ್ಕುಗಳನ್ನು ಈಡೇರಿಸುವ ಕಡೆಗೆ ಬಹಳ ಹೆಚ್ಚು ಗಮನಹರಿಸಬೇಕಾಗಿದೆ. ರಮಝಾನಿನ ಕೊನೆಯ ಹತ್ತು ದಿನಗಳಲ್ಲಿ ಬೇರೆ ಯಾವ ದಿನಗಳಲ್ಲಿ ಕಾಣದಷ್ಟು ಪರಿಶ್ರಮವನ್ನು ಹಝ್ರತ್ ಪೈಗಂಬರ್(ಸ) ಮಾಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಸತ್ಯವಿಶ್ವಾಸಿಗಳಿಗೆ ಅತ್ಯುತ್ತಮ ಮಾದರಿಯಾಗಿದ್ದರು. ಆದ್ದರಿಂದ ನಾವು ನಮ್ಮ ಸಾಮರ್ಥ್ಯಗಳ ಪ್ರಕಾರ ಈ ಉನ್ನತ ಮಟ್ಟಗಳನ್ನು ತಲುಪಲು ಪ್ರಯತ್ನಿಸಬೇಕಾಗಿದೆ. ನಾವು ಈ ದಿನಗಳಲ್ಲಿ ವಿಶೇಷವಾಗಿ ಪ್ರಾರ್ಥನೆಗಳಲ್ಲಿ ನಿರತರಾಗಬೇಕು. ಅಹ್ಮದಿಯರು ವಿಶೇಷವಾಗಿ ಈ ಕಡೆಗೆ ಗಮನಹರಿಸಬೇಕಾದ ಆವಶ್ಯಕತೆಯಿದೆ. ಪಾಕಿಸ್ತಾನದಲ್ಲೂ ಇತರ ಮುಸ್ಲಿಂ ರಾಷ್ಟ್ರಗಳಲ್ಲೂ ಜಮಾಅತಿನ ವಿರುದ್ಧ ಹಲವು ಪ್ರಯತ್ನಗಳು ನಡೆಯುತ್ತಿವೆ. ಅಲ್ಲಾಹನು ಇವುಗಳಿಂದ ನಮ್ಮನ್ನು ರಕ್ಷಿಸಲಿ. ಅದೇ ರೀತಿಯಲ್ಲಿ ಈಗ ಹರಡಿರುವ ಮಹಾಮಾರಿಯಿಂದಲೂ ಅಲ್ಲಾಹನು ನಮ್ಮನ್ನು ಸುರಕ್ಷಿತಗೊಳಿಸಲಿ. ಆಮೀನ್.

ಹಝ್ರತ್ ಪೈಗಂಬರ್(ಸ) ಮತ್ತು ಈ ಕಾಲಘಟ್ಟದಲ್ಲಿ ಅವರ ಸತ್ಯಸಂಧ ದಾಸರಾದ ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ದುಆಗಳು ಸ್ವೀಕಾರ ಆಗುವ ಮಾರ್ಗವನ್ನು ಅಲ್ಲಾಹನು ನಮಗೆ ಕಲಿಸಿ ಕೊಟ್ಟಿದ್ದಾನೆ. ಅಲ್ಲಾಹನ ಸ್ತುತಿಕೀರ್ತನೆ ಮಾಡುವುದರೊಂದಿಗೆ ಹಝ್ರತ್ ಪೈಗಂಬರ್(ಸ)ರ ಮೇಲೆ ದುರೂದ್ ಪ್ರಾರ್ಥನೆ ಮಾಡುವುದು ದುಆ ಸ್ವೀಕಾರಕ್ಕೆ ಬಹಳ ಆವಶ್ಯಕವಾದುದಾಗಿದೆ. ಇಲ್ಲದಿದ್ದರೆ ದುಆಗಳು ಭೂಮಿ ಮತ್ತು ಆಕಾಶದ ನಡುವೆ ಬಾಕಿಯಾಗಿ ಉಳಿಯುತ್ತವೆ. ಹಝ್ರತ್ ಪೈಗಂಬರ್(ಸ) ಹೇಳಿದ್ದರು: ನನ್ನ ಮೇಲೆ ದುರೂದ್ ಪ್ರಾರ್ಥನೆಗಳನ್ನು ಮಾಡಿರಿ, ನೀವು ದುರೂದ್ ಪ್ರಾರ್ಥನೆಗಳನ್ನು ಮಾಡುವುದರಿಂದ ಅದು ನಿಮ್ಮದೇ ಪರಿಶುದ್ಧಿ ಮತ್ತು ಪ್ರಗತಿಗೆ ಕಾರಣವಾಗುವುದು. ಯಾರು ಹೃದಯ ನಿಷ್ಠೆಯಿಂದ ನನ್ನ ಮೇಲೆ ದುರೂದ್ ಪ್ರಾರ್ಥನೆ ಮಾಡುತ್ತಾರೋ ಅವರ ಮೇಲೆ ಅಲ್ಲಾಹನು ಹತ್ತು ಪಟ್ಟು ಅನುಗ್ರಹವನ್ನು ಸುರಿಸುತ್ತಾನೆ ಮತ್ತು ಹತ್ತು ಪದವಿಗಳನ್ನು ಉನ್ನತಗೊಳಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್(ಅ)ರ ಮೂಲಕ ಹಝ್ರತ್ ಪೈಗಂಬರ್(ಸ)ರ ಸ್ಥಾನಮಾನಗಳು ಮತ್ತು ಪದವಿಗಳ ಬಗ್ಗೆ ಚೆನ್ನಾಗಿ ತಿಳಿದಿದ್ದೇವೆ ಎಂದು ನಾವು ವಾದಿಸುತ್ತೇವೆ. ಹೀಗಿರುವಾಗ ದುರೂದಿನ ಪ್ರಾಧಾನ್ಯವನ್ನು ಅರಿಯುವುದು ನಮ್ಮ ಕರ್ತವ್ಯವಾಗಿದೆ. ಅಲ್ಲಾಹನು ನಮ್ಮ ದುಆಗಳನ್ನು ಅಂಗೀಕರಿಸಲಿ ಎಂಬ ಉದ್ದೇಶದಿಂದ ಮಾತ್ರ ನಾವು ದುರೂದ್ ಪ್ರಾರ್ಥನೆಗಳನ್ನು ಮಾಡಬಾರದು. ಬದಲಾಗಿ ಸ್ಥಿರವಾದ ಪರಿಶುದ್ಧಿ ನಮ್ಮ ಜೀವನದ ಭಾಗವಾಗಬೇಕು ಎಂಬ ಉದ್ದೇಶದಿಂದ ಮಾಡಬೇಕು.

ತನಗೆ ಲಭಿಸಿದ ದಿವ್ಯವಾಣಿಯಾದ **"ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದಿನ್ ಸಯ್ಯಿದಿ ವುಲ್‌ದೇ ಆದಮ ವ ಖಾತಮಿನ್ನಬಿಯ್ಯೀನ"** ಎಂಬುದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎಲ್ಲ ಪದವಿಗಳು, ಶ್ರೇಷ್ಠತೆಗಳು ಮತ್ತು ವರದಾನಗಳು ದುರೂದ್ ಪ್ರಾರ್ಥನೆಗಳ ಮೂಲಕ ಮತ್ತು ಹಝ್ರತ್ ಪೈಗಂಬರರೊಡನೆ ಇರಿಸುವ ಪ್ರೇಮದ ಪ್ರತಿಫಲವಾಗಿ ಲಭಿಸುವುವು ಎಂಬುದಕ್ಕೆ ಈ ದಿವ್ಯವಾಣಿ ಸೂಚನೆ ನೀಡುತ್ತದೆ. ಸುಬ್‌ಹಾನಲ್ಲಾಹ್! ಏಕದೇವನಾದ ಅಲ್ಲಾಹನ ಮುಂದೆ ಪ್ರಪಂಚದ ಸರದಾರರಾದ ಹಝ್ರತ್ ಪೈಗಂಬರರಿಗೆ ಎಂತಹ ಶ್ರೇಷ್ಠವಾದ ಸ್ಥಾನಗಳಿವೆ ಎಂದರೆ, ಅವರನ್ನು ಪ್ರೀತಿಸುವವನನ್ನು ಅಲ್ಲಾಹನು ಪ್ರೀತಿಸುವನು. ಅವರ ಸೇವಕನಾಗುವವನು ಒಂದು ಲೋಕದ ಯಜಮಾನನಾಗುತ್ತಾನೆ. ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಬಂದ ಉಮ್ಮತಿ ನಬಿಯಾಗಿರುವರು. ಅವರನ್ನು ಹಝ್ರತ್ ಪೈಗಂಬರ್(ಸ)ರ ಕೆಲಸಗಳನ್ನು ಹರಡಲಿಕ್ಕಾಗಿ ಅಲ್ಲಾಹನು ಕಳುಹಿಸಿದ್ದಾನೆ. ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಇಂದು ಲೋಕದಲ್ಲಿ ಇರುವ ಸ್ಥಾನಕ್ಕೆ ಕಾರಣವೇನೆಂದರೆ, ಅವರು ಹಝ್ರತ್ ಪೈಗಂಬರ್(ಸ)ರ ದಾಸರಾಗಿದ್ದರು ಎಂಬುದಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಂದು ರಾತ್ರಿ ನಾನು ನನ್ನ ಹೃದಯ ಮತ್ತು ಮನಸ್ಸು ಸುಗಂಧಭರಿತವಾಗುವಷ್ಟರ ಮಟ್ಟಿಗೆ ದುರೂದ್ ಶರೀಫ್ ಪ್ರಾರ್ಥನೆಗಳನ್ನು ಮಾಡಿದೆ. ಅದೇ ರಾತ್ರಿ ನಾನು ಕನಸಿನಲ್ಲಿ ಹೀಗೆ ಕಂಡೆನು: ದೇವದೂತರು ಪ್ರಕಾಶದ ತೊಗಲ ಚೀಲಗಳನ್ನು ನನ್ನ ಮನೆಗೆ ತರುತ್ತಿದ್ದಾರೆ. ಅವರಲ್ಲಿ ಒಬ್ಬ ದೇವದೂತರು ಹೇಳಿದರು: "ಇವು ನೀನು ಮುಹಮ್ಮದ್

ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಳುಹಿಸಿದ ದುರೂದ್ ಪ್ರಾರ್ಥನೆಗಳ ಅನುಗ್ರಹಗಳಾಗಿವೆ."

**"ಹಾಧಾ ರಜುಲುನ್ ಯುಹಿಬ್ಬು ರಸೂಲಲ್ಲಾಹ್"** (ಇವರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುವ ವ್ಯಕ್ತಿಯಾಗಿರುವರು) ಎಂದು ಆಕಾಶದ ದೇವದೂತರು ಸಹ ಯಾರ ಬಗ್ಗೆ ಹೇಳಿದ್ದರೋ ಆ ಮಸೀಹ್ ಮತ್ತು ಮಹ್‌ದಿಯನ್ನು ನಾವು ನಂಬುವವರಾಗಿದ್ದೇವೆ. ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಈ ವಾಕ್ಯದ ತಾತ್ಪರ್ಯವೇನೆಂದರೆ, ಧರ್ಮೋದ್ಧಾರ ಮಾಡಲು ಇರಬೇಕಾದ ಯೋಗ್ಯತೆ ಮತ್ತು ಹಿರಿದಾದ ನಿಬಂಧನೆಯೇನೆಂದರೆ, ಹಝ್ರತ್ ಪೈಗಂಬರರೊಡನೆ ಪ್ರೇಮವಿರಬೇಕು ಎಂದಾಗಿದೆ. ಆದ್ದರಿಂದ ಆ ಧರ್ಮೋದ್ಧಾರಕನ ಮಹತ್ಕಾರ್ಯವನ್ನು ಮುಂದಕ್ಕೆ ಕೊಂಡು ಹೋಗುವ ಪ್ರತಿಜ್ಞೆಯನ್ನು ಮಾಡಿರುವ ನಮ್ಮ ಕರ್ತವ್ಯವೇನೆಂದರೆ, ನಾವು ಹಝ್ರತ್ ಪೈಗಂಬರ್[ಸ]ರ ಮೇಲೆ ದುರೂದ್ ಮತ್ತು ಸಲಾಮಿನ ಪ್ರಾರ್ಥನೆಯನ್ನು ಮಾಡುತ್ತಾ ಈ ಮಸೀಹ್ ಮತ್ತು ಮಹ್‌ದಿಯ ಸಹಾಯಕರಾಗಬೇಕು. ಖಿಯಾಮತ್ ದಿನದ ತನಕ ನಾವು ಈ ಅನುಗ್ರಹಗಳ ಮತ್ತು ಶ್ರೇಷ್ಠತೆಗಳ ವಾರಸುದಾರರಾಗಬೇಕಾದರೆ, ಹಝ್ರತ್ ಪೈಗಂಬರ್[ಸ]ರ ಮೇಲೆ ದುರೂದ್ ಪ್ರಾರ್ಥನೆಗಳನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ಹೀಗೆ ಮಾಡಿದರೆ ಶತ್ರುಗಳ ಕುತಂತ್ರಗಳು ಮತ್ತು ಅವರ ಆಕ್ರಮಣಗಳು ಅಲ್ಲಾಹನ ಅನುಗ್ರಹದಿಂದ ನಾಶವಾಗುವುದನ್ನು ನಾವು ಕಾಣುವೆವು.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಸ್ವಲಾತಿನ ಅರ್ಥ ದುಆ ಎಂದಾಗಿದೆ. **ಅಲ್ಲಾಹುಮ್ಮ ಸಲ್ಲಿ** ಎಂಬುದರ ಅರ್ಥ, ಹೇ ಅಲ್ಲಾಹ್ ನೀನು ಹಝ್ರತ್ ಪೈಗಂಬರ್[ಸ]ರಿಗೆ ದುಆ ಮಾಡು ಎಂದಾಗುತ್ತದೆ. ಅಲ್ಲಾಹನು ದುಆ ಮಾಡುತ್ತಾನೆ ಎಂದು ನಾವು ಅವನ ಬಗ್ಗೆ ಹೇಳುವುದರ ಅರ್ಥವೇನೆಂದರೆ, ನನ್ನ ದಾಸನಿಗೆ ನೆರವು ನೀಡು ಎಂದು ಅಲ್ಲಾಹನು ತಾನು ಸೃಷ್ಟಿಸಿದ ಎಲ್ಲ ವಸ್ತುಗಳೊಂದಿಗೆ ಹೇಳುತ್ತಾನೆ ಎಂದಾಗಿದೆ. ಒಟ್ಟಿನಲ್ಲಿ **ಅಲ್ಲಾಹುಮ್ಮ ಸಲ್ಲಿ** ಎಂಬುದರ ಅರ್ಥ, ಹೇ ಅಲ್ಲಾಹ್, ನೀನು ಎಲ್ಲ ರೀತಿಯ ಒಳಿತುಗಳನ್ನು ಹಝ್ರತ್ ಪೈಗಂಬರ್[ಸ]ರಿಗೆ ಕೊಡಲು ಬಯಸುತ್ತಿರು ಎಂದಾಗಿದೆ. **ಅಲ್ಲಾಹುಮ್ಮ ಬಾರಿಕ್** ಎಂಬುದರ ಅರ್ಥ, ಹೇ ಅಲ್ಲಾಹ್, ಸಕಲ ಪ್ರಪಂಚದ ಕಾರುಣ್ಯಗಳು ಮತ್ತು ಅನುಗ್ರಹಗಳು ಒಟ್ಟುಗೂಡುವಷ್ಟು ನಿನ್ನ ಕೃಪೆಗಳನ್ನು, ಅನುಗ್ರಹಗಳನ್ನು ಮತ್ತು ವರದಾನಗಳನ್ನು ನೀನು ಹಝ್ರತ್ ಪೈಗಂಬರರಿಗಾಗಿ ಪ್ರದಾನಿಸು ಎಂದಾಗಿದೆ.

ಒಟ್ಟಿನಲ್ಲಿ, ನಾವು ಹೃದಯದಲ್ಲಿ ನೋವನ್ನು ಇರಿಸಿಕೊಂಡು ಹಝ್ರತ್ ಪೈಗಂಬರ್[ಸ]ರ ಧರ್ಮದ ಏಳಿಗೆಗಾಗಿ ದುಆ ಮಾಡುವವರಾದರೆ, ಅಲ್ಲಾಹನು ನಮ್ಮನ್ನು ಸಹ ಈ ದುಆಗಳಿಂದ ಮತ್ತು ದುರೂದ್‌ಗಳಿಂದ ಅನುಗ್ರಹಿಸುವನು. ಆದರೆ, ನಿಬಂಧನೆಯೇನೆಂದರೆ, ಹಝ್ರತ್ ಪೈಗಂಬರರ ಅಧ್ಯಾಪನೆ ಪ್ರಕಾರ ನಡೆಯಬೇಕು, ಅಲ್ಲಾಹನ ಮತ್ತು ಅವನ ಸೃಷ್ಟಿಗಳ ಹಕ್ಕುಗಳ ಕಡೆಗೆ ಗಮನಹರಿಸಬೇಕು ಮತ್ತು ಹಝ್ರತ್ ಪೈಗಂಬರರ ಕುಟುಂಬದ ಯಥಾರ್ಥ ಸದಸ್ಯರಾಗುವ ಯೋಗ್ಯತೆ ಇರಬೇಕು. ಬದಲಾಗಿ ಅಲ್ಲಾಹನ ಮತ್ತು ಅವನ ಪ್ರವಾದಿಯ ಹೆಸರಿನಲ್ಲಿ ದೌರ್ಜನ್ಯವನ್ನು ಮಾಡುವುದಲ್ಲ. ಕಾನೂನು ನಿಯಮಗಳನ್ನು ಉಲ್ಲಂಘಿಸಿಕೊಂಡು, ಜನರಿಗೆ ತೊಂದರೆ ಕೊಟ್ಟು, ರೋಗಿಗಳು ಸಹ ಆಸ್ಪತ್ರೆಗಳಿಗೆ ಹೋಗದಂತೆ ರಸ್ತೆಗಳನ್ನು ತಡೆಗಟ್ಟಿಕೊಂಡು ನಾವು ಹಝ್ರತ್ ಪೈಗಂಬರರ ಪ್ರೇಮಿಗಳಾಗಿದ್ದೇವೆ ಎಂದು ಹೇಳಿಕೊಂಡು ದುರೂದ್ ಪ್ರಾರ್ಥನೆ ಮಾಡುತ್ತಾ ನಮ್ಮ ಬಗ್ಗೆ ಏನೂ ಹೇಳಬೇಡಿರಿ ಎಂದು ಹೇಳುವುದಲ್ಲ. ಇವೆಲ್ಲ ಸಂಗತಿಗಳು ಅಲ್ಲಾಹ್ ಮತ್ತು ಅವನ ಪ್ರವಾದಿಯ ಆಜ್ಞೆಗಳನ್ನು ಕಿಂಚಿತ್ತೂ ಅನುಸರಿಸದೇ ಇರುವುದಾಗಿದೆ.

ಹಝ್ರತ್ ಪೈಗಂಬರ್[ಸ]ರ ಮೇಲೆ ದುರೂದ್ ಪ್ರಾರ್ಥನೆಗಳನ್ನು ಮಾಡಲು ಪವಿತ್ರ ಖುರ್‌ಆನಿನಲ್ಲಿ ಸತ್ಯವಿಶ್ವಾಸಿಗಳೊಡನೆ ಹೇಳಿರುವುದರಿಂದಲೂ ದುರೂದ್ ಪ್ರಾರ್ಥನೆಯ ಪ್ರಾಮುಖ್ಯತೆಯ ಅಂದಾಜು ಇನ್ನೂ ಹೆಚ್ಚಾಗಿ ಗೊತ್ತಾಗುತ್ತದೆ. ಹಝ್ರತ್ ಮಸೀಹ್ ಮೌಊದ್[ಅ] ಸೂರಃ ಅಹ್‌ಝಾಬ್‌ನ 57ನೆಯ ವಚನವನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್[ಸ]ರ ಸತ್ಕರ್ಮಗಳು ಹೇಗಿತ್ತೆಂದರೆ, ಅಲ್ಲಾಹನು ಅವರ ಪ್ರಶಂಸೆ ಮತ್ತು ಸ್ವಭಾವ ಗುಣವೈಶಿಷ್ಟ್ಯಗಳನ್ನು ಸಂಪೂರ್ಣವಾಗಿ ವಿವರಿಸಲಿಕ್ಕಾಗಿ ಒಂದು ವಿಶೇಷವಾದ ಪದವನ್ನು ಪ್ರಯೋಗಿಸಲಿಲ್ಲ. ಎಂದರೆ, ಅವರ ಸತ್ಕರ್ಮಗಳು ಪ್ರಶಂಸೆಯ ಪರಿಮಿತಿಯಲ್ಲಿ ನಿಲುಕುವಂತದ್ದಾಗಿರಲಿಲ್ಲ. ಈ ರೀತಿಯ ವಚನವನ್ನು ಬೇರೆ ಯಾವುದೇ ಪ್ರವಾದಿಯ ಪರವಾಗಿ ಉಪಯೋಗಿಸಲಿಲ್ಲ. ಅವರ ಆತ್ಮದಲ್ಲಿ ಸತ್ಯ ಮತ್ತು ಪರಿಶುದ್ಧತೆಯಿತ್ತು. ಹಝ್ರತ್ ಪೈಗಂಬರ್[ಸ]ರ ಸತ್ಕರ್ಮಗಳು ಅಲ್ಲಾಹನ ದೃಷ್ಟಿಯಲ್ಲಿ ಎಷ್ಟು ಪ್ರಿಯಕರವಾಗಿತ್ತು ಎಂದರೆ, ಇನ್ನು ಮುಂದೆ ಜನರು ಕೃತಜ್ಞತೆಯ ರೂಪದಲ್ಲಿ ಹಝ್ರತ್ ಪೈಗಂಬರ್[ಸ]ರ ಮೇಲೆ ಯಾವಾಗಲೂ ದುರೂದ್ ಪ್ರಾರ್ಥನೆಗಳನ್ನು ಮಾಡಬೇಕೆಂದು ಅಲ್ಲಾಹನು ಆಜ್ಞಾಪಿಸಿದನು. ಈ ರಮಝಾನಿನಲ್ಲೂ ಅನಂತರವೂ ದುರೂದ್ ಪ್ರಾರ್ಥನೆಯ ಪ್ರಾಮುಖ್ಯತೆಯನ್ನು ಅರಿಯುತ್ತಾ ಸದಾ ದುರೂದ್ ಪ್ರಾರ್ಥನೆ ಮಾಡುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ನೀಡಲಿ.

ನಾನು ನಿಮ್ಮ ಗಮನವನ್ನು ವಿಶೇಷವಾಗಿ ಸೆಳೆಯಲು ಬಯಸುವ ಎರಡನೇ ಸಂಗತಿ **ಇಸ್ತಿಗ್‌ಫಾರ್** ಆಗಿದೆ. **ಅಸ್ತಗ್‌ಫಿರುಲ್ಲಾಹ ರಬ್ಬೀ ಮಿನ್‌ಕುಲ್ಲಿ ಧನ್‌ಬಿನ್ ವ ಅತೂಬು ಇಲೈಹಿ** ಎಂದರೆ, ನಾನು ಸಕಲ ಪಾಪಗಳಿಂದ ನನ್ನ ಪರಿಪಾಲಕನಾದ ಅಲ್ಲಾಹನಲ್ಲಿ ಕ್ಷಮೆ ಯಾಚಿಸುತ್ತೇನೆ. ಅವನೆಡೆಗೆ ಪಶ್ಚಾತ್ತಾಪ ಮಾಡುತ್ತಾ ಬಾಗುತ್ತೇನೆ. ಈ ದುಆ ಅತ್ಯಂತ ಮುಖ್ಯವಾದ ಪ್ರಾರ್ಥನೆಯಾಗಿದೆ. ಹಝ್ರತ್ ಮಸೀಹ್ ಮೌಊದ್[ಅ] ಈ ಕುರಿತು ಹೇಳುತ್ತಾರೆ: ಮಾನುಷಿಕವಾದ ಯಾವುದೇ ದೌರ್ಬಲ್ಯ ಪ್ರಕಟವಾಗಬಾರದೆಂದೂ ಮತ್ತು ಅಲ್ಲಾಹನು ನಮ್ಮನ್ನು ಅವನ ಶಕ್ತಿಯ ಸಹಾಯ ಮತ್ತು ನೆರವಿನಿಂದ ಸುರಕ್ಷಿತಗೊಳಿಸಲಿ ಎಂದೂ ಅಲ್ಲಾಹನೊಡನೆ ವಿನಂತಿಸುವುದನ್ನು ಯಥಾರ್ಥ ಮತ್ತು ನೈಜವಾದ ಅರ್ಥದಲ್ಲಿ ಇಸ್ತಿಗ್‌ಫಾರ್ ಎಂದು ಹೇಳಲಾಗುತ್ತದೆ. ಇಸ್ತಿಗ್‌ಫಾರ್ ಎಂಬುದು ಗ಼ಫರ ಎಂಬ ಮೂಲಪದದಿಂದ ಬಂದದ್ದಾಗಿದೆ. ಅದರ ಅರ್ಥ ಮುಚ್ಚುವುದು ಅಥವಾ ಮರೆಸುವುದು ಎಂದಾಗಿದೆ. ಆದರೆ ಸಾಮಾನ್ಯ ಜನರಿಗಾಗಿ ಈ ಪದದ ಅರ್ಥವನ್ನು ವಿಶಾಲಗೊಳಿಸಲಾಗಿದೆ. ಮಾಡಲಾದ ಪಾಪಗಳನ್ನು ಸಹ ಮರೆಸು

ಎಂದು ಅಲ್ಲಾಹನಲ್ಲಿ ಪ್ರಾರ್ಥಿಸುವುದನ್ನೂ ಇಸ್ತಿಗ್‌ಫಾರ್ ಎಂದು ಹೇಳಲಾಗುತ್ತದೆ. ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿ ಅವನಿಂದ ದೂರ ಹೋಗುವುದಿಲ್ಲ. ಅಲ್ಲಾಹನು ಮನುಷ್ಯನ ಸೃಷ್ಟಿಕರ್ತನಾಗಿರುವ ಹಾಗೆಯೇ ಅಲ್ಲಾಹನು ಮನುಷ್ಯನ **ಖಯ್ಯೂಮ್** ಸಹ ಆಗಿದ್ದಾನೆ. ಎಂದರೆ, ಅವನ ನೆರವಿನಿಂದ ಎಲ್ಲವನ್ನೂ ಸುರಕ್ಷಿತಗೊಳಿಸುವವನೂ ನೆಲೆನಿಲ್ಲಿಸುವವನೂ ಆಗಿದ್ದಾನೆ.

ಇದರ ಕುರಿತು **“ಅಲ್ಲಾಹು ಲಾ ಇಲಾಹ ಇಲ್ಲಾ ಹುವಲ್ ಹಯ್ಯುಲ್ ಖಯ್ಯೂಂ”**ನಲ್ಲಿ ಸೂಚನೆ ನೀಡಲಾಗಿದೆ. ಮನುಷ್ಯನನ್ನು ಸೃಷ್ಟಿಸಲಾಗುವಾಗ ಸೃಷ್ಟಿ ಮಾಡುವ ಕೆಲಸ ಪೂರ್ತಿಯಾಗುತ್ತದೆ. ಆದರೆ ನೆಲೆನಿಲ್ಲಿಸುವ ಕೆಲಸ ಸದಾ ಇರುತ್ತದೆ. ಆದ್ದರಿಂದ ಯಾವಾಗಲೂ **ಇಸ್ತಿಗ್‌ಫಾರ್** ಮಾಡುವ ಅಥವಾ ಕ್ಷಮೆಯಾಚಿಸುವ ಆವಶ್ಯಕತೆ ಬಂತು. ಇದರ ಕಡೆಗೆ **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್ತಈನ್** ಎಂಬ ವಚನ ಬೊಟ್ಟು ಮಾಡುತ್ತದೆ. ಎಂದರೆ ನಾವು ನಿನ್ನನ್ನೇ ಆರಾಧಿಸುತ್ತೇವೆ ಮತ್ತು ನಿನ್ನಿಂದಲೇ ಸಹಾಯವನ್ನು ಯಾಚಿಸುತ್ತೇವೆ. ನಿನ್ನ **ಖಯ್ಯೂಮಿಯ್ಯತ್** ಎಂದರೆ, ಸದಾ ನೆಲೆನಿಲ್ಲಿಸುವವನು ಮತ್ತು **ರುಬೂಬಿಯ್ಯತ್** ಎಂದರೆ ಪರಿಪಾಲಕನು ಎಂಬ ಗುಣದಿಂದ ನಮಗೆ ಸಹಾಯ ಮಾಡು ಹಾಗೂ ನಮ್ಮನ್ನು ಎಡವಿ ಬೀಳುವುದರಿಂದ ರಕ್ಷಿಸು.

ಅಲ್ಲಾಹನು ಎಷ್ಟರ ಮಟ್ಟಿಗೆ ಕ್ಷಮಿಸುವನು ಎಂದು ಅನೇಕ ಮಕ್ಕಳು ಮತ್ತು ಯುವಕರು ಕೇಳುತ್ತಿರುತ್ತಾರೆ. ಅಲ್ಲಾಹನು ಹೇಳುತ್ತಾನೆ: ನನ್ನ ಕಾರುಣ್ಯ ಬಹಳ ವಿಶಾಲವಾದುದಾಗಿದೆ. ಅದಕ್ಕೆ ಯಾವುದೇ ಮಿತಿಯಿಲ್ಲ. ಆದರೆ ಮನುಷ್ಯನು ನಿಜವಾಗಿಯೂ ಪಶ್ಚಾತ್ತಾಪ ಮಾಡಬೇಕು ಎಂಬುದಾಗಿದೆ ಅದರ ನಿಬಂಧನೆ ಅಥವಾ ಶರತ್ತು. ಹಝ್ರತ್ ಪೈಗಂಬರ್(ಸ) ಹೇಳಿದರು: ಮರುಭೂಮಿಯಲ್ಲಿ ಕಾಣೆಯಾದ ಒಂಟೆ ಮರಳಿ ಪತ್ತೆಯಾಗುವಾಗ ಅದರ ಯಜಮಾನನಿಗೆ ಉಂಟಾಗುವ ಸಂತೋಷಕ್ಕಿಂತ ಹೆಚ್ಚಿನ ಸಂತೋಷವನ್ನು ಅಲ್ಲಾಹನು ಪಶ್ಚಾತ್ತಾಪ ಮಾಡುವ ವ್ಯಕ್ತಿಯ ಮೇಲೆ ತೋರಿಸುತ್ತಾನೆ. ಅಲ್ಲಾಹನು ಹೇಳುತ್ತಾನೆ: ಒಂದು ಮೊಳದಷ್ಟು ನನ್ನ ಕಡೆಗೆ ಬರುವವನ ಕಡೆಗೆ ನಾನು ಎರಡು ಮೊಳದಷ್ಟು ಸಮೀಪವಾಗುತ್ತೇನೆ. ಆದ್ದರಿಂದ ನಮ್ಮನ್ನು ಸ್ವತಃ ಪಾಪಗಳಿಂದ ದೂರವಿರಿಸಲಿಕ್ಕಾಗಿಯೂ ಮಾಡಿದ ಪಾಪಗಳಿಗೆ ಕ್ಷಮೆಯಾಚಿಸಲಿಕ್ಕಾಗಿಯೂ ಅಲ್ಲಾಹನ ಕಡೆಗೆ ಧಾವಿಸಬೇಕು. ಅಲ್ಲಾಹನು ಈ ತಿಂಗಳನ್ನು ವಿಶೇಷವಾಗಿ ಈ ಕೆಲಸಕ್ಕಾಗಿ ನಮಗೆ ನೀಡಿದ್ದಾನೆ. ಈ ರಮಝ಼ಾನಿನ ತಿಂಗಳು ದುಆ ಸ್ವೀಕಾರದ ಮಾಸ ಆಗಿದೆ. ಇದರ ಕೊನೆಯ ಹತ್ತು ದಿವಸ ನರಕದಿಂದ ರಕ್ಷಣೆ ಪಡೆಯಬಹುದಾದ ದಿನಗಳಾಗಿವೆ. ಆದ್ದರಿಂದ ನಾವು ನಮ್ಮ ಸಂಬಂಧವನ್ನು ಅಲ್ಲಾಹನೊಂದಿಗೆ ಜೋಡಿಸಬೇಕು. ನಮ್ಮ ಸಂಬಂಧ ಅಲ್ಲಾಹನೊಂದಿಗೆ ಆಗುವುದಾದರೆ, ನಮ್ಮ ದುರೂದ್ ಪ್ರಾರ್ಥನೆಗಳು ಮತ್ತು ನಮ್ಮ ಇಸ್ತಿಗ್‌ಫಾರ್ ಪ್ರಾರ್ಥನೆಗಳು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವಂತಹದ್ದು ಆಗಿದ್ದರೆ, ಶತ್ರುಗಳು ಶತಪ್ರಯತ್ನಗಳನ್ನು ಮಾಡಿದರೂ ನಮಗೆ ಯಾವುದೇ ಹಾನಿಯನ್ನು ಉಂಟುಮಾಡಲು ಅವರಿಗೆ ಸಾಧ್ಯವಲ್ಲ.

ರಮಝ಼ಾನಿನ ದುಆಗಳಲ್ಲಿ ವಿರೋಧಿಗಳ ಉಪದ್ರಗಳಿಂದ ರಕ್ಷಣೆ ಪಡೆಯಲು ಸಹ ಬಹಳವಾಗಿ ದುಆ ಮಾಡಿರಿ. ಅದೇ ರೀತಿಯಲ್ಲಿ ಕೊರೋನ ಮಹಾಮಾರಿಯಿಂದ ಸುರಕ್ಷಿತಗೊಳ್ಳಲು ಸಹ ದುಆ ಮಾಡಿರಿ. ಅಲ್ಲಾಹನು ಈ ಮಹಾಮಾರಿಯಿಂದ ಲೋಕದ ಎಲ್ಲ ಜನರನ್ನೂ ರಕ್ಷಿಸಲಿ. ನಮ್ಮನ್ನು ಸಹ ಸುರಕ್ಷಿತವಾಗಿರಿಸಲಿ. ಅಲ್ಲಾಹನು ನಮ್ಮನ್ನು ನೈಜ ರೂಪದಲ್ಲಿ ದುರೂದ್ ಮತ್ತು ಇಸ್ತಿಗ್‌ಫಾರ್ ಮಾಡುವವರನ್ನಾಗಿ ಮಾಡಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 30-04-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha’at Team for Nazarath Nashr-O-Isha’ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon